# ಎನ್‌ಐಟಿಕೆ: ಮಾದಕ ದ್ರವ್ಯ ಮುಕ್ತ ಭಾರತಕ್ಕಾಗಿ ಪ್ರತಿಜ್ಞೆ



**ಸುರತ್ಕಲ್, ಜೂ.27:** ಕೇಂದ್ರ ಸರಕಾರದ ಶಿಕ್ಷಣ ಸಚಿವಾಲಯದ ನಿರ್ದೇಶನದಂತೆ ಸುರತ್ಕಲ್‌ನ ನ್ಯಾಶನಲ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ ಕರ್ನಾಟಕ ಅಂತಾರಾಷ್ಟ್ರೀಯ ಮಾದಕ ದ್ರವ್ಯ ಸೇವನೆ ಮತ್ತು ಅಕ್ರಮ ಕಳ್ಳಸಾಗಣೆ ವಿರೋಧಿ ದಿನಾಚರಣೆಯ ಅಂಗವಾಗಿ ವಿದ್ಯಾರ್ಥಿಗಳು, ಬೋಧಕರು ಮತ್ತು ಸಿಬಂದಿಯೊಂದಿಗೆ ಕೈಜೋಡಿಸಿ ಮಾದಕ ದ್ರವ್ಯ ಮುಕ್ತ ಭಾರತ ಪ್ರತಿಜ್ಞೆಯನ್ನು ಎನ್ ಐಟಿಕೆ ಕ್ಯಾಂಪಸ್ ನಲ್ಲಿ ಆಚರಿಸಲಾಯಿತು.

ವಿದ್ಯಾರ್ಥಿ ಕಲ್ಯಾಣ ವಿಭಾದ ಮುಖ್ಯಸ್ಥ ಪ್ರೊ। ಎ.ಸಿ. ಹೆಗ್ಡೆ ಮಾತನಾಡಿ, ಮಾದಕವಸ್ತು ಸಮಸ್ಯೆಗಳು ಜಾಗತಿಕ ಪರಿಣಾಮಗಳನ್ನು ಬೀರುತ್ತದೆ. ಮಾದಕ ಮುಕ್ತ ಸಮಾಜ ನಿರ್ಮಾಣ, ಅದರಲ್ಲೂ ವಿದ್ಯಾರ್ಥಿ ಸಮುದಾಯ ಜೀವನವನ್ನೇ ಬಲಿ ಪಡೆಯುವ ಇಂತಹ ವ್ಯಸನದಿಂದ ದೂರವಿರಬೇಕು. ಆರೋಗ್ಯಯುತ ಜೀವನದೊಂದಿಗೆ ಸತ್ಪ್ರಜೆಯಾಗಿ ಬಾಳುವ ಸಂಕಲ್ಪ ನಾವೆಲ್ಲ ತೊಡಬೇಕಿದೆ ಎಂದರು.

ಪ್ರತಿಜ್ಞೆ ಸಮಾರಂಭದಲ್ಲಿ ಎನ್‌ಐಟಿಕೆ ಸಂಸ್ಥೆಯ ಪ್ರೊಫೆಸರ್ ವರ್ಗ, ಅಧ್ಯಾಪಕರು, ಆಡಳಿತ ಪ್ರಮುಖರು, ವಿದ್ಯಾರ್ಥಿಗಳು ಭಾಗವಹಿಸಿ ಮಾದಕ ವ್ಯಸನ ಮುಕ್ತ ಸಮಾಜದ ಸಂಕಲ್ಪ ತೊಟ್ಟರು.

Udayavani, Date:28/06/24, p, no-03